

# ಪ್ರಹಸನ ಪ್ರಸಂಗ

**ಒ**ಬ್ಬ ಪ್ರಸಿದ್ಧ ಗುರಿಗಾರ ಒಂದು ಸಣ್ಣ ಹಳ್ಳಿಯ ಮೂಲಕ ಪ್ರಯಾಣಿಸುತ್ತಿದ್ದ. ಅಲ್ಲಿ ಒಂದು ಅದ್ಭುತ ದೃಶ್ಯವನ್ನು ಕಂಡು ಬೆರಗಾದ. ಮನೆಗಳ ಎಲ್ಲ ಗೋಡೆಗಳ ಮೇಲೆ ವೃತ್ತಗಳ ಚಿತ್ರವಿದ್ದು ಸರಿಯಾಗಿ ಅವುಗಳೆಲ್ಲದರ ಕೇಂದ್ರಗಳನ್ನೂ ಯಾರೋ ಅದ್ಭುತವಾಗಿ ಗುರಿಯಿಟ್ಟು ಹೊಡೆದಿದ್ದರು. ಇದನ್ನು ಕಂಡು ಅಂತಹ ನಿಪುಣನ ಪರಿಚಯ ಮಾಡಿಕೊಳ್ಳಲೇ ಬೇಕು ಎಂದು ಬಹಳ ಆಸಕ್ತಿಯಿಂದ ಅವನ ಬಗ್ಗೆ ವಿಚಾರಿಸಿದ. ಇದೆಲ್ಲ ಆ ಹಳ್ಳಿಯ ಒಬ್ಬ ಸಾಮಾನ್ಯ ವ್ಯಕ್ತಿಯ ಕೆಲಸವೆಂದು ತಿಳಿದುಬಂದಾಗ ಮತ್ತಷ್ಟು ಆಶ್ಚರ್ಯವಾಯಿತು ಇವನಿಗೆ. ಕಡೆಗೂ ಅವನನ್ನು ಕಂಡು ವಿನಯದಿಂದ ಅಭಿನಂದಿಸುತ್ತ ಹೇಳಿದ, "ನಾನು ಸೇನೆಯಲ್ಲಿ ಕೆಲಸಮಾಡುತ್ತಿರುವ ಪ್ರಸಿದ್ಧ ಗುರಿಗಾರ. ಆದರೆ ತಾವು ಈ ಹಳ್ಳಿಯ ಎಲ್ಲ ಗೋಡೆಗಳ ಮೇಲೆ ತೋರಿಸಿರುವ ಕೈಚಳಕ ಕಂಡು ವಿಸ್ಮಯವಾಗುತ್ತಿದೆ. ಇದು ಬಹಳ ಅದ್ಭುತವಾದ ಸಾಧನೆ. ತಮಗೆ ಹೇಗೆ ಸಾಧ್ಯವಾಯಿತು?" ಆ ಹಳ್ಳಿಯವ ಹೇಳಿದ, "ಬಹಳ ಸುಲಭ. ನಾನು ಮೊದಲು ಗುಂಡು ಹಾರಿಸಿ ತೂತು ಮಾಡುತ್ತೇನೆ. ಆಮೇಲೆ ವೃತ್ತವನ್ನು ಚಿತ್ರಿಸುತ್ತೇನೆ!"

* * *

**ಸಾ**ಕುಪ್ರಾಣಿಗಳನ್ನು ಮಾರುವವನ ಅಂಗಡಿಗೆ ಒಬ್ಬ ವ್ಯಕ್ತಿ ಬಂದು ಕೋಪದಿಂದ ಹೇಳಿದ, "ಏನ್ರೀ? ಈ ಪೆದ್ದು ನಾಯಿಯನ್ನು ಕಾವಲುನಾಯಿ ಅಂತ ನನಗೆ ಮಾರಿದಿರಲ್ರೀ! ನಿನ್ನೆ ನನ್ನ ಮನೆಗೆ ಕಳ್ಳ ನುಗ್ಗಿ ಮುನ್ನೂರು ರೂಪಾಯಿಗಳನ್ನು ಕದ್ದರೂ ಈ ಹಾಳು ನಾಯಿ ಸದ್ದೇ ಮಾಡಲಿಲ್ಲ!" ಅಂಗಡಿಯವ ಹೇಳಿದ, "ಅಲ್ಲ ಸಾರ್! ಈ ನಾಯಿ ಮೊದಲು ಒಬ್ಬ ಕೋಟ್ಯಧೀಶನ ಮನೆಯಲ್ಲಿತ್ತು. ಅದಕ್ಕೇ ಅಷ್ಟು ಸಣ್ಣ ಕಳ್ಳತನಕ್ಕೆ ಅದು ಪ್ರತಿಕ್ರಿಯೆ ತೋರಲಿಲ್ಲ!"

* * *

**ಒ**ಬ್ಬ ವ್ಯಕ್ತಿ ವೈದ್ಯರ ಬಳಿ ಬಂದು ಹೇಳಿದ, "ನೀವು ಕೊಟ್ಟ ಔಷಧಿಗೆ ಕೃತಜ್ಞತೆಗಳು. ಅದರಿಂದ ಬಹಳ ಸಹಾಯವಾಯಿತು. ತುಂಬ ಉಪಕಾರ ಮಾಡಿದಿರಿ, ಡಾಕ್ಟರ್." ವೈದ್ಯರು ಆ ವ್ಯಕ್ತಿಗೆ, "ಅಲ್ಲಪ್ಪ! ನಿಮ್ಮನ್ನು ನಾನು ನೋಡಿದ್ದೇ ನೆನಪಿಲ್ಲ! ನಾನು ಯಾವಾಗ ಔಷಧಿ ಕೊಟ್ಟೆ ನಿಮಗೆ?" ಆತ ಹೇಳಿದ, 'ನನ್ನ ಚಿಕ್ಕಪ್ಪ ನಿಮ್ಮ ಪೇಷೆಂಟು. ನೀವು ಕೊಟ್ಟ ಔಷಧವನ್ನು ತೆಗೆದುಕೊಂಡು ಮೂರೇ ದಿನಗಳಲ್ಲಿ ತೀರಿಕೊಂಡರು. ಅವರ ಎಲ್ಲ ಆಸ್ತಿ ಈಗ ನನಗೇ ಬಂದಿದೆ."

* * *

"**ಅ**ಪ್ಪ, ರಾಜಕೀಯದಲ್ಲಿ ದ್ರೋಹಿ ಯಾರು?" ಎಂದು ಮಗ ಕೇಳಿದ. 'ನಮ್ಮ ಪಾರ್ಟಿಯನ್ನು ಬಿಟ್ಟು ಬೇರೆ ಪಾರ್ಟಿಯನ್ನು ಸೇರುವವನೇ ದ್ರೋಹಿ" ಎಂದು ತಂದೆ ಉತ್ತರಿಸಿದ. "ಹಾಗಾದರೆ, ಬೇರೆ ಪಾರ್ಟಿಯನ್ನು ಬಿಟ್ಟು ನಮ್ಮ ಪಾರ್ಟಿ ಸೇರುವವರು ಯಾರು?" ಮಗ ಮರುಪ್ರಶ್ನೆ ಹಾಕಿದ "ಅವನು ದೇಶಪ್ರೇಮಿ" ಎಂದು ತಂದೆ ಉತ್ತರಿಸಿದ.

* * *

**ಒ**ಬ್ಬಾಕೆ ಹೊಸದಾಗಿ ತೋಟಗಾರಿಕೆ ಇಲಾಖೆಯಿಂದ ತರಬೇತಿ ಪಡೆದು ಮನೆಯಂಗಳದಲ್ಲಿ ತೋಟ ಪ್ರಾರಂಭಿಸಿದ್ದಳು. ಅವಳಿಗೆ ಸಮಯ ಹೆಚ್ಚು ದೊರೆಯಲಿ ಎಂದು ಗಂಡ ತಮ್ಮ ಮೂರೂ ಮಕ್ಕಳನ್ನು ಸ್ನೇಹಿತನ ಮನೆಗೆ ಕರೆದೊಯ್ದ. ಅವರು ಹೊರಟಮೇಲೆ ಬಹಳ ಆಸಕ್ತಿಯಿಂದ ನಾಲ್ಕು ದೊಡ್ಡ ಗುಂಡಿಗಳನ್ನು ಅಗೆದು, ಮಣ್ಣು ಗೊಬ್ಬರಗಳನ್ನು ತುಂಬಿ ಆಯಾಸದಿಂದ ಆಕೆ ದಣಿವಾರಿಸಿಕೊಳ್ಳಲು ಕುಳಿತಾಗ ಪಕ್ಕದ ಮನೆಯವನು ಸಂಶಯದಿಂದ ಈಕೆಯ ಕೆಲಸವನ್ನು ಗಮನಿಸುತ್ತಿದ್ದುದು ಕಂಡು ಬಂದಿತು. ಈಕೆ ನಾಲ್ಕು ಪಾತಿಗಳನ್ನು ಮಾಡಿ ಗಿಡಗಳನ್ನು ನೆಡಲು ಕೆಲಸ ಮಾಡುತ್ತಿದ್ದೇನೆ ಎಂದು ವಿವರಿಸಿದಳು. ಅವನು ನಿಟ್ಟುಸಿರು ಬಿಟ್ಟು ಹೇಳಿದ, "ಸದ್ಯ! ನಾನು ನಿನ್ನ ಮನೆಯವರನ್ನೆಲ್ಲ ಹೂತುಬಿಟ್ಟಿಯೇನೋ ಎಂದುಕೊಂಡೆ."


ಜಾಹೀರಾತು ಬೆಂಗಳೂರಿನ **"ಶ್ರವಣಕುಮಾರ ಓರಿಯರ ಆಶ್ರಯ ಮತ್ತು ಸೇವಾಗೃಹ ಟ್ರಸ್ಟ್"**, ಓರಿಯರ ಆಶ್ರಮಧಾಮವನ್ನು ಪ್ರಾರಂಭಿಸಿದೆ. ಮಧ್ಯಮವರ್ಗದವರಿಗೆ ಅಗತ್ಯವಿರುವ ಎಲ್ಲ ಸೌಲಭ್ಯಗಳನ್ನು ಈ ವೃದ್ಧಾಶ್ರಮದಲ್ಲಿ ಒದಗಿಸಲಾಗುವುದು. ಆಸಕ್ತಿಯುಳ್ಳವರು ವಿವರಗಳಿಗೆ ಸಂಪರ್ಕಿಸಬಹುದು:

ಶ್ರವಣಕುಮಾರ ಓರಿಯರ ಆಶ್ರಯ ಮತ್ತು ಸೇವಾಗೃಹ ಟ್ರಸ್ಟ್, ೫೬, ೩ನೇಕ್ರಾಸ್, ಅಮರಜ್ಯೋತಿ ನಗರ, ವಿಜಯನಗರ, ಬೆಂಗಳೂರು – ೫೬೦ ೦೪೦ ದೂರವಾಣಿ ಸಂ: (080)–30907129 - 2846 2433, 2340 8672